# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 905 |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು. |
| ಉತ್ತರಿಸುವ ದಿನಾಂಕ | : | 14-03-2025. |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುವ ಕೇಂದ್ರ ಪರಿಹಾರ ಕೇಂದ್ರ, ಸುಮ್ಮನಹಳ್ಳಿ ಇದು ಒಟ್ಟು ಎಷ್ಟು ಎಕರೆ ಪ್ರದೇಶವನ್ನು ಹೊಂದಿದೆ ಹಾಗೂ ಈ ಜಾಗದಲ್ಲಿ ನಡೆಯುತ್ತಿರುವ ಚಟುವಟಿಕೆಗಳೇನು; ಈ ಜಾಗದಲ್ಲಿ ಯಾವುದಾದರೂ ಸಂಘ ಸಂಸ್ಥೆ ಅಥವಾ ಎನ್‌ಜಿಒ ಗಳಿಗೆ ಇಷ್ಟು ಅವಧಿಗೆಂದು ಜಮೀನನ್ನು ಗುತ್ತಿಗೆಗೆ ನೀಡಲಾಗುತ್ತಿದೆಯೇ; ನೀಡಿದ್ದಲ್ಲಿ ಇದರ ಒಟ್ಟು ವಿಸ್ತೀರ್ಣವೆಷ್ಟು ಹಾಗೂ ಸರ್ಕಾರ ನಿಗದಿಪಡಿಸಿರುವ ಹಣವೆಷ್ಟು; ಸಂಸ್ಥೆಯ ಪೂರ್ಣ ವಿವರ ನೀಡುವುದು;</td><td>ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಕೇಂದ್ರ ಪರಿಹಾರ ಸಮಿತಿಯ ಅಧೀನದಲ್ಲಿರುವ ಸ್ಥಳೀಯ ಪರಿಹಾರ ಸಮಿತಿಯ ನಿರಾಶ್ರಿತರ ಪರಿಹಾರ ಕೇಂದ್ರ, ಬೆಂಗಳೂರು ಇದು 224.16 ಎಕರೆ ವಿಸ್ತೀರ್ಣ ಹೊಂದಿದೆ. ಅದರಲ್ಲಿ ಕೆಳಕಂಡಂತೆ 58.37 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ನೀಡಲಾಗಿದೆ. ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಭಿಕ್ಷಾಟನೆಯಲ್ಲಿ ತೊಡಗಿರುವವರನ್ನು ರಕ್ಷಿಸಿ ಅವರಿಗೆ ಉಚಿತ ಊಟ, ವಸತಿ ಕಲ್ಪಿಸಿ ತರಬೇತಿ ನೀಡಲಾಗುತ್ತಿದೆ. ತಹಶಿಲ್ದಾರ್ ಆದೇಶದಂತೆ ಕನಿಷ್ಟ 01 ವರ್ಷ, ಗರಿಷ್ಟ 03 ವರ್ಷ ಅವಧಿಗೆ ಪುನರ್ವಸತಿ ಕಲ್ಪಿಸಿ ತದನಂತರ ಬಿಡುಗಡೆ ಮಾಡಲಾಗುತ್ತಿದೆ.<br><br>
<table>
<tr><th>ಸಂಸ್ಥೆಗಳ ವಿವರ</th><th>ಗುತ್ತಿಗೆ ನೀಡಲಾದ ಜಮೀನಿನ ವಿಸ್ತೀರ್ಣ (ಎಕರೆ/ ಗುಂಟೆ ಗಳಲ್ಲಿ)</th><th>ವಾರ್ಷಿಕ ಎಕರೆಗೆ ನಿಗದಿ ಪಡೆಸಿರುವ ಹಣ</th></tr>
<tr><td>ಸುಮನಹಳ್ಳಿ ಕುಷ್ಠರೋಗಿಗಳ ಪುನರ್‌ವಸತಿ ಕೇಂದ್ರ,</td><td>43.19</td><td>ವಾರ್ಷಿಕ ಎಕರೆ ಒಂದಕ್ಕೆ ರೂ.1,000/-ದಂತೆ ದಿನಾಂಕ:.01.01.2018 ರಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
<tr><td>ನಾಡ ಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ</td><td>5.00</td><td>ವಾರ್ಷಿಕ ಎಕರೆ ಒಂದಕ್ಕೆ ರೂ.1,000/-ದಂತೆ ದಿನಾಂಕ:01-01-2018 ರಿಂದ 30 ವರ್ಷ ಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
<tr><td>ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ</td><td>4.18</td><td>ದಿನಾಂಕ: 15-02-1986 ರಿಂದ 99 ವರ್ಷ ಲೀಸ್ ಆಧಾರದ ಮೇಲೆ ನೀಡಲಾಗಿದೆ.</td></tr>
<tr><td>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ</td><td>4.00</td><td>ವಾರ್ಷಿಕ ಎಕರೆ ಒಂದಕ್ಕೆ ರೂ.10,000/-ಗಳಂತೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
<tr><td>ಬೆಂಗಳೂರು ಮಹಾನಗರ ಪಾಲಿಕೆ (ವಿದ್ಯುತ್ ಚಿತಾಗಾರ ನಿರ್ಮಿಸಲು)</td><td>2.00</td><td>ವಾರ್ಷಿಕ ಎಕರೆ ಒಂದಕ್ಕೆ ರೂ.100/- ಗಳಂತೆ 30 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿದೆ.</td></tr>
</table>
</td></tr>
</table>

| | | |
|---|---|---|
| ಆ) | ಗುತ್ತಿಗೆ ಪಡೆದುಕೊಂಡ ಸಂಸ್ಥೆಯವರು ಎಷ್ಟು ವಿಸ್ತೀರ್ಣ ಪ್ರದೇಶದಲ್ಲಿ ತಮ್ಮ ಕಾರ್ಯಚಟುವಟಿಕೆ ಮಾಡುತ್ತಿದ್ದಾರೆ; ಅವುಗಳು ಯಾವುವು ಉಳಿದ ಜಾಗದಲ್ಲಿ ನಡೆಯುತ್ತಿರುವ ಚಟುವಟಿಕೆಗಳೇನು; | ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿರುವ ಜಾಗವನ್ನು ಆಯಾ ಸಂಸ್ಥೆಯವರು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡಿದ್ದು, ಸಂಸ್ಥೆಗೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ. |
| ಇ) | ಜಮೀನನ್ನು ಗುತ್ತಿಗೆ ನೀಡಿದ ಸಂದರ್ಭದಲ್ಲಿ ಸರ್ಕಾರ ವಿಧಿಸಿರುವ ನೀತಿ ನಿಯಮಗಳೇನು; ನಿಯಮ ಇದ್ದರೂ ಸಹ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರವು ಕಾಲಕಾಲಕ್ಕೆ ನೀಡುವ ನಿರ್ದೇಶನ ಹಾಗೂ ಆದೇಶಗಳಂತೆ ನೀತಿ ನಿಯಮಗಳನ್ನು ರೂಪಿಸಿ ವಿವಿಧ ಇಲಾಖೆ ಮತ್ತು ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ. ಗುತ್ತಿಗೆ ನೀಡುವ ಸಂದರ್ಭದಲ್ಲಿ ಜಮೀನಿನಲ್ಲಿ ಹೊಸದಾಗಿ ಕಟ್ಟಡಗಳನ್ನು ನಿರ್ಮಿಸಬಾರದು, ಹಳೆ ಕಟ್ಟಡಗಳಿಗೆ ಹಾನಿ ಉಂಟುಮಾಡಬಾರದು ಹಾಗೂ ಸರ್ಕಾರವು ನಿಗದಿಪಡಿಸಿದ ಗುತ್ತಿಗೆ ಮೊತ್ತವನ್ನು ಕಾಲಕಾಲಕ್ಕೆ ಪಾವತಿಸುವ ನೀತಿ ನಿಯಮಗಳನ್ನು ರೂಪಿಸಿ ಜಮೀನನ್ನು ಗುತ್ತಿಗೆ ನೀಡಲಾಗಿರುತ್ತದೆ. |
| ಈ) | ಬಂದಿದ್ದಲ್ಲಿ, ಈ ಸಂಸ್ಥೆಯ ವಿರುದ್ಧ ಸರ್ಕಾರ ತೆಗೆದು ಕೊಂಡಿರುವ ಕ್ರಮವೇನು; ಇದನ್ನು ಗಮನಹರಿಸಬೇಕಾಗಿರುವ ಅಧಿಕಾರಿಗಳು ಯಾರು, ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದಾದರೂ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ತೆಗೆದು ಕೊಳ್ಳಲಾಗಿದೆಯೇ; | ಇವುಗಳ ಪೈಕಿ ಸುಮನಹಳ್ಳಿ ಕುಷ್ಟರೋಗಿಗಳ ಪುನರ್‌ವಸತಿ ಕೇಂದ್ರವನ್ನು ಹೊರತುಪಡಿಸಿ ಇತರೆ ಯಾವುದೇ ಸಂಸ್ಥೆಯವರು ನಿಯಮ ಉಲ್ಲಂಘನೆಯನ್ನು ಮಾಡಿರುವುದಿಲ್ಲ.<br><br>ಸುಮನಹಳ್ಳಿ ಕುಷ್ಟರೋಗಿಗಳ ಪುನರ್ವಸತಿ ಕೇಂದ್ರಕ್ಕೆ ನೀಡಲಾದ ಗುತ್ತಿಗೆ ಜಮೀನನ್ನು ಬಿ.ಬಿ.ಎಂ.ಪಿ.ಯವರು ಅತಿಕ್ರಮಣ ಮಾಡಿ ಶಾಲೆ, ಆಸ್ಪತ್ರೆ, ತ್ಯಾಜ್ಯ ಘಟಕ ಹಾಗೂ ಇತರೆ ಕಟ್ಟಡಗಳನ್ನು ನಿರ್ಮಿಸಿರುತ್ತಾರೆ. ಈ ಬಗ್ಗೆ ಕಾಲಕಾಲಕ್ಕೆ ಸರ್ಕಾರಕ್ಕೆ ಮಾಹಿತಿಯನ್ನು ಒದಗಿಸಿದ್ದು, ಘನ ನ್ಯಾಯಾಲಯದಲ್ಲಿ ಸುಮನಹಳ್ಳಿ ಕುಷ್ಟರೋಗಿಗಳ ಪುನರ್ವಸತಿ ಕೇಂದ್ರವು ತಡೆಯಾಜ್ಞೆ ತಂದಿರುತ್ತಾರೆ.<br><br>ಅಧೀಕ್ಷಕರು, ಬೆಂಗಳೂರು ನಿರಾಶ್ರಿತರ ಪರಿಹಾರ ಕೇಂದ್ರ, ಇವರು ಕೇಂದ್ರ ಪರಿಹಾರ ಸಮಿತಿಗೆ ಜಮೀನು ಅತಿಕ್ರಮದ ಬಗ್ಗೆ ಕಾಲಕಾಲಕ್ಕೆ ನೋಟಿಸ್ ಜಾರಿ ಮಾಡಿ ಸದರಿ ಅತಿಕ್ರಮದ ಕಟ್ಟಡಗಳನ್ನು ನಿರ್ಮಾಣ ಮಾಡದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ಇರುತ್ತದೆ. |
| ಉ) | ಸರ್ಕಾರದ ಜಮೀನನ್ನು ಸರ್ಕಾರದ ಕಾರ್ಯ ಚಟುವಟಿಕೆಗಳಿಗೆ ಬಳಸಿಕೊಳ್ಳುವುದಕ್ಕೆ ಉಪಯೋಗಿಸಿಕೊಳ್ಳುವುದನ್ನು ಬಿಟ್ಟು, ಈ ರೀತಿ ಗುತ್ತಿಗೆ ನೀಡುವ ಅನಿವಾರ್ಯತೆ ಉದ್ದೇಶಗಳೇನು; | ಸರ್ಕಾರವು ಕಾಲಕಾಲಕ್ಕೆ ನೀಡುವ ಆದೇಶಗಳಂತೆ ವಿವಿಧ ಇಲಾಖೆ ಮತ್ತು ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದೆ. |

| | | |
|---|---|---|
| ಊ) | ಸರ್ಕಾರ ಗುತ್ತಿಗೆ ನೀಡುವ ಸಂಧರ್ಭದಲ್ಲಿ ಯಾವ ಯಾವ ಉದ್ದೇಶಕ್ಕೆ ಬಳಸಿಕೊಳ್ಳಬೇಕೆಂದು ಷರತ್ತು ವಿಧಿಸಲಾಗಿದೆಯೇ; ಷರತ್ತಿಗೆ ವಿರುದ್ಧವಾಗಿ ಸಂಸ್ಥೆಯವರು ಖಾಸಗಿಯವರಿಗೆ ಬಾಡಿಗೆಗೆ ನೀಡಿ, ಹಣ ಸಂಪಾದನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಸುಮ್ಮನಹಳ್ಳಿ ಕುಷ್ಟರೋಗಿಗಳ ಪುನರ್‌ವಸತಿ ಕೇಂದ್ರಕ್ಕೆ 43.19 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇರೆಗೆ ಜಮೀನನ್ನು ನೀಡಿದ್ದು, ಇದರಲ್ಲಿ ಕುಷ್ಠರೋಗಿಗಳ ಚಿಕಿತ್ಸೆ ಆರೈಕೆ ಹಾಗೂ ಪುನರ್ವಸತಿ ಕಲ್ಪಿಸಿದ್ದು, ಕೆಲವು ಜಾಗವನ್ನು ಬಿ.ಬಿ.ಎಂ.ಪಿ.ಯವರು ಒತ್ತುವರಿ ಮಾಡಿಕೊಂಡಿರುತ್ತಾರೆ.<br><br>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆರವರಿಗೆ 4.00 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇರೆಗೆ ಜಮೀನನ್ನು ನೀಡಿದ್ದು, ಇದರಲ್ಲಿ ಬಿ.ಎಂ.ಟಿ.ಸಿ ಸಂಸ್ಥೆಯವರಿಗೆ ನೀಡಲಾದ ಜಾಗದಲ್ಲಿ ಭಾರತ ಸರ್ಕಾರದ ಸ್ವಾಯತ ಸಂಸ್ಥೆಯಾದ ಗೇಲ್ ಇಂಡಿಯಾ ಲಿಮಿಟೆಡ್, (GAIL) ಸಂಸ್ಥೆಯವರಿಗೆ ಒಳಗುತ್ತಿಗೆ ನೀಡಿದ್ದು, ಕೇಂದ್ರ ಪರಿಹಾರ ಸಮಿತಿಯ ಕಾರಾರು ಒಪ್ಪಂದ ಕ್ರಮ ಸಂಖ್ಯೆ:12,13 ಮತ್ತು 14ರ ಷರತ್ತಿರನ್ವಯ ಗೇಲ್ ಸಂಸ್ಥೆಯವರಿಂದ ಬಿ.ಎಂ.ಟಿ.ಸಿ ಸಂಸ್ಥೆಯವರಿಗೆ ಬರುವ ಲಾಭದಲ್ಲಿ ಶೇ. 20%ರಷ್ಟು ಕಾರ್ಯದರ್ಶಿ, ಕೇಂದ್ರ ಪರಿಹಾರ ಸಮಿತಿಗೆ ಪಾವತಿಸುವಂತೆ ನಿರ್ದೇಶಿಸಲಾಗಿದೆ.<br><br>ಉಳಿದಂತೆ ಇತರೆ ಸಂಸ್ಥೆಗಳಿಗೆ ನೀಡಿರುವ ಗುತ್ತಿಗೆ ನೀಡಲಾದ ಜಾಗವನ್ನು ಆಯಾ ಸಂಸ್ಥೆಯವರು ಪೂರ್ಣಪ್ರಮಾಣದಲ್ಲಿ ಬಳಸಿಕೊಂಡಿದ್ದಾರೆ. |

**No: SWD/16/SBR/2025**

(**ಡಾ||ಹೆಚ್.ಸಿ.ಮಹದೇವಪ್ಪ**)
ಸಮಾಜ ಕಲ್ಯಾಣ ಸಚಿವರು.